**ದಿನಾಂಕಃ 13.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ. ಎಸ್ ಆರ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ ಮತ್ತು ವಿಷಯ ತಿಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಿಪಿ. 1 ನ್ನು ನಾನು ನಂಜುಂಡಯ್ಯರವರು ಹೇಳಿದಂತೆ ಬರೆದಿರುತ್ತೇನೆ. ವಿಲ್ ತಯಾರಿಸಲು ಗಂಗೋತ್ರಿ ಲೇ ಔಟ್ ನಲ್ಲಿರುವ ತಮ್ಮ ಮನೆಯ ಪತ್ರಗಳನ್ನು ನೀಡಿ ಮಗಳ ಸರೋಜ ಅವರ ಹೆಸರಿಗೆ ಬರೆಯುವಂತೆ ಕೋರಿದರು. ಆ ರೀತಿ ತಯಾರಿಸಿದ್ದೇನೆ. ನಿಪಿ. 1 ರಲ್ಲಿರುವ ನನ್ನ ಸಹಿಯನ್ನು ಗುರುತಿಸಿದ್ದೇನೆ. ಅದನ್ನು ನಿಪಿ. 1(ಸಿ) ಎಂದು ಗುರುತಿಸಲಾಯಿತು. ನಂಜುಂಡಯ್ಯರವರು ನಿಪಿ. 1(ಬಿ) ರಂತೆ ನಿಪಿ. 1 ಕ್ಕೆ ಸಹಿ ಮಾಡಿದ್ದಾರೆ.

**ಪಾಟೀಸವಾಲುಃ** ಎದುರುದಾರರು ಗೈರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.